# ಕೃತಕ ಬುದ್ಧಿಮತ್ತೆ, ಕ್ವಾಂಟಮ್ ಕಂಪ್ಯೂಟಿಂಗ್, ಸೇನಾಕ್ಷೇತ್ರದಲ್ಲಿ ಪಾರಮ್ಯ - ಚೀನಾಕ್ಕೆ ದೊರಕಿಸಿಕೊಟ್ಟೀತೆ ವಿಶ್ವದ ‘ಸೂಪರ್ ಪವರ್’ ಮುಕುಟ!



2019ರಲ್ಲಿ ಚಂದ್ರನಲ್ಲಿ ಇಳಿದ ಚೀನಾದ ಲ್ಯಾಂಡರ್ ತೆಗೆದ ಮೊದಲ ಚಿತ್ರ

ನಂಬರ್ 1 ಸ್ಥಾನ ಯಾರಿಗೆ ಬೇಡ? ಚೀನಾ ದೇಶವಂತೂ ವಿಶ್ವದ ಹಿರಿಯಣ್ಣನ ಪಟ್ಟಕ್ಕಾಗಿ ನಿರಂತರವಾಗಿ ಪ್ರಯತ್ನಿಸುತ್ತಲೇ ಇದೆ. ತನ್ನ ಗುರಿಸಾಧನೆಯ ದಾರಿಯಲ್ಲಿ ಚೀನಾ ಸಾಕಷ್ಟು ಮಾರ್ಗವನ್ನೂ ಸವೆಸಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಚೀನಾದ ಸಾಧನೆ ಹಾಗೂ ಯೋಜನೆಗಳು ಅಚ್ಚರಿಹುಟ್ಟಿಸುವಂತಿವೆ. ಸದ್ಯದಲ್ಲೇ ಅಮೆರಿಕವನ್ನು ಹಿಂದಿಕ್ಕಿ, ವಿಶ್ವದ ಸರ್ವಶಕ್ತ ದೇಶವೆನ್ನಿಸಿಕೊಳ್ಳಲು ಚೀನಾ ನೆಚ್ಚಿರುವ ಮಂತ್ರ – ವಿಜ್ಞಾನ ಮತ್ತು ತಂತ್ರಜ್ಞಾನ. ಕೃತಕ ಬುದ್ಧಿಮತ್ತೆ, ಕ್ವಾಂಟಮ್ ಸಂವಹನ, ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಪಾರಮ್ಯ ಸಾಧಿಸುವುದು ಯಶಸ್ಸಿನ ಕೀಲಿಕೈ ಎನ್ನುವುದು ಚೀನಾಕ್ಕೆ ಮನದಟ್ಟಾಗಿದೆ. ಆ ಕಾರಣದಿಂದಾಗಿ, ಭೂಮಿ, ಬಾಹ್ಯಾಕಾಶ ಮಾತ್ರವಲ್ಲದೆ ನೀರಿನಾಳದಲ್ಲೂ ಚೀನಾದ ಮಹತ್ವಾಕಾಂಕ್ಷೆಯ ಹೆಜ್ಜೆಗಳು ಕಾಣಿಸುತ್ತಿವೆ.

■ ಇ.ಎಸ್. ಸುಧೀಂದ್ರ ಪ್ರಸಾದ್